# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಕವಿಪ್ರನಿನಿ/ಬಿ5ಬಿ/11333/2009-10

KPTCL

ನಿಗಮ ಕಾರ್ಯಾಲಯ,
ಕಾವೇರಿ ಭವನ,
ಬೆಂಗಳೂರು-560 009

ದಿನಾಂಕ: 16 DEC 2016

**ಸು ತ್ತೋ ಲೆ**

**ವಿಷಯ:** ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರಗಳ ಘೋಷಣೆ ಬಗ್ಗೆ.

**ಉಲ್ಲೇಖ:** 1. ಆದೇಶ ಸಂಖ್ಯೆ: ಕೆಇಬಿ/ಬಿ4/7626/85-86 ದಿನಾಂಕ: 07-08-1987.
2. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ34/ಎಸ್ಎ4/7626/1985-86 ದಿನಾಂಕ: 03.02.2009.

---

ಕವಿಮಂ ನೌಕರರ ಸೇವಾ (ನಡೆತ) ನಿಬಂಧನೆಗಳು 1988ರ ನಿಬಂಧನೆ 23ರ ಅನ್ವಯ ಅಧಿಕಾರಿಗಳು/ನೌಕರರು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ನಿಗದಿತ ನಮೂನೆಯಲ್ಲಿ ಪ್ರತೀ ವರ್ಷವೂ ಸಲ್ಲಿಸಬೇಕಾಗಿರುತ್ತದೆ. ನಿಗದಿತ ದಿನಾಂಕದಂದು ಸಲ್ಲಿಸದಿದ್ದಲ್ಲಿ ಕರ್ತವ್ಯ ಲೋಪವೆಂದು ಪರಿಗಣಿಸುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ, ರಾಜ್ಯಾವಾರು ಪದವೃಂದದ ಅಧಿಕಾರಿಗಳು ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಹಾಗೂ ಇತರೆ ಸಿಬ್ಬಂದಿಯು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಿಗಳಿಗೆ ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ತಪ್ಪದೇ ಸಲ್ಲಿಸತಕ್ಕದ್ದು. ಈ ವಿಷಯದಲ್ಲಿ ಕೆಳಕಂಡ ನಿರ್ದೇಶನವನ್ನು ನೀಡಲಾಗಿದೆ:

1. ಪ್ರತೀ ವರ್ಷದಂತೆ ಎಲ್ಲಾ ಅಧಿಕಾರಿಗಳು/ನೌಕರರು ಈ ವರ್ಷವೂ ಸಹ **ದಿನಾಂಕ 31-12-2016 ರಂದು ಇರುವಂತೆ** ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಮೇಲೆ ತಿಳಿಸಿದಂತೆ ಸಂಬಂಧಿಸಿದ ಕಛೇರಿಗಳಿಗೆ ಆಸ್ತಿ ಮತ್ತು ಹೊಣೆ ಪಟ್ಟಿಯೊಂದಿಗೆ **ಅನುಬಂಧದ ಪತ್ರವನ್ನು ಲಗತ್ತಿಸಿ** ಸಲ್ಲಿಸತಕ್ಕದ್ದು.

2. ರಾಜ್ಯಾವಾರು ಪದವೃಂದದ ಅಧಿಕಾರಿಗಳು ವಿವರಗಳನ್ನು ಹಾಗೂ **ತಮ್ಮ ಪಿ.ಐ.ಎನ್. ಸಂಖ್ಯೆಯನ್ನು** ತಪ್ಪದೇ ನಮೂದಿಸಿ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ ರವರಿಗೆ ನೇರವಾಗಿ ಕಳುಹಿಸತಕ್ಕದ್ದು.

3. ಸಂಬಂಧಿಸಿದ ನೇಮಕಾತಿ ಪ್ರಾಧಿಕಾರವು ಈ ವಿವರವನ್ನು ನಿಗದಿತ ನಮೂನೆಯಲ್ಲಿ 'ಸಿ' ಮತ್ತು 'ಡಿ' ಗುಂಪಿನ ನೌಕರರಿಂದ ಪಡೆದು ಅವರ ಕಛೇರಿಯಲ್ಲಿ ವೈಯಕ್ತಿಕ ಕಡತಗಳನ್ನು ನಿರ್ವಹಿಸತಕ್ಕದ್ದು.

4. ಅಧಿಕಾರಿಗಳು/ನೌಕರರು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಲ್ಲಿಸದೆ ಇದ್ದಲ್ಲಿ, ಅವರಿಗೆ ನಿರಾಕ್ಷೇಪಣಾ ಪತ್ರಗಳನ್ನು ಅಥವಾ ಯಾವುದೇ ವಿಶೇಷ ಅನುಮತಿಯನ್ನು ನೀಡತಕ್ಕದ್ದಲ್ಲ.

5. ಅಧಿಕಾರಿಗಳು/ನೌಕರರು **ತಮ್ಮ 2016 ರ ಕ್ಯಾಲೆಂಡರ್ ವರ್ಷದ** ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಂಬಂಧಿಸಿದ ಕಛೇರಿಗಳಿಗೆ ಸಲ್ಲಿಸಲು **ಕೊನೆಯ ದಿನಾಂಕ 28-02-2017.** ವಿವರವನ್ನು ಸಲ್ಲಿಸದ ಅಧಿಕಾರಿಗಳ/ನೌಕರರ ವಿರುದ್ಧ **ದಿನಾಂಕ: 01-03-2017 ರ ನಂತರ** ಶಿಸ್ತು ಕ್ರಮವನ್ನು ಜರುಗಿಸತಕ್ಕದ್ದು.

6. ‘ಎ’ ಮತ್ತು ‘ಬಿ’ ಗುಂಪಿನ ಎಲ್ಲಾ ಅಧಿಕಾರಿಗಳು ತಮ್ಮ ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ಸಲ್ಲಿಸಿದ ಬಗ್ಗೆ **ಮಾರ್ಚ್ 2017 ತಿಂಗಳ ವೇತನದ ಹುಂಡಿಯಲ್ಲಿ** ದೃಢೀಕರಿಸತಕ್ಕದ್ದು.

7. ಎಲ್ಲಾ ಅಧಿಕಾರಿ/ನೌಕರರು ಸಲ್ಲಿಸಿರುವ ಪ್ರಸ್ತುತ ವರ್ಷದ ಚರ/ಸ್ಥಿರ ಆಸ್ತಿ ಮತ್ತು ಹೊಣೆ ಪಟ್ಟಿಯನ್ನು ಹಿಂದಿನ ವರ್ಷದ ಆಸ್ತಿ ಮತ್ತು ಹೊಣೆ ಪಟ್ಟಿಯೊಂದಿಗೆ ಹೋಲಿಕೆ ಮಾಡಿ, ಹೆಚ್ಚಿನ ವ್ಯತ್ಯಾಸ/ಅಂತರ ಕಂಡುಬಂದಲ್ಲಿ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಗಳು ಸಂಬಂಧಿಸಿದ ಅಧಿಕಾರಿ/ನೌಕರರುಗಳಿಗೆ ಪತ್ರದ ಮೂಲಕ ಸ್ಪಷ್ಟೀಕರಣವನ್ನು ಪಡೆದು ಕಡತದಲ್ಲಿ ಸೇರಿಸುವಂತೆ ಸೂಚಿಸಿದೆ.

8. ನೌಕರರ ಸೇವಾ (ನಡತೆ) ನಿಯಮ 14 ರಲ್ಲಿ ತಿಳಿಸಿರುವಂತೆ ಅಧಿಕಾರಿ/ನೌಕರರು ಬಂಧುಗಳಿಂದ ಅಥವಾ ಆಪ್ತ ಸ್ನೇಹಿತರಿಂದ ನಗದು ಅಥವಾ ವಸ್ತುಗಳ ರೂಪದಲ್ಲಿ ಪಡೆದ/ಸ್ವೀಕರಿಸಿದ ಕೊಡುಗೆಗಳು ನಿಗಧಿ ಪಡಿಸಿರುವ ಮೊತ್ತಕ್ಕಿಂತ ಹೆಚ್ಚಿದ್ದರೆ ಈ ಬಗ್ಗೆ ನೇಮಕಾತಿ ಪ್ರಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸುವಂತೆ ಸೂಚಿಸಿದೆ.

9. ನೌಕರರ ಸೇವಾ (ನಡತೆ) ನಿಯಮ 23 ರಲ್ಲಿ ತಿಳಿಸಿರುವಂತೆ ಅಧಿಕಾರಿ/ನೌಕರರು ಚರ ಮತ್ತು ಸ್ಥಿರ ಆಸ್ತಿ ವಿಷಯದಲ್ಲಿ ವರದಿ ಮಾಡುವ ಅಥವಾ ಅನುಮತಿ ಪಡೆಯಬೇಕಾಗಿರುವ ಸಂದರ್ಭದಲ್ಲಿ ನೇಮಕಾತಿ ಪ್ರಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದು.

10. ಅಧಿಕಾರಿ/ನೌಕರರು ಅನುಬಂಧದ ಪತ್ರದಲ್ಲಿ ಹಿಂದಿನ ವರ್ಷಗಳಿಂದ ಮುಂದುವರೆದ ಮತ್ತು ಪ್ರಸ್ತುತ ವರ್ಷದ ಒಟ್ಟು ಉಳಿತಾಯದ ಮೊತ್ತವನ್ನು ನಮೂದಿಸುವಂತೆ ಸೂಚಿಸಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಮೇಲಧಿಕಾರಿಗಳು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಸಿಬ್ಬಂದಿಗೆ ಈ ವಿಷಯವನ್ನು ತಿಳಿಸಲು ಕೋರಿದೆ. ಚರ/ಸ್ಥಿರ ಆಸ್ತಿ ಹಾಗೂ ಹೊಣೆಗಳ ವಿವರವನ್ನು ನೀಡುವ ನಮೂನೆಯನ್ನು www.kptcl.com=>eprasarana ನಲ್ಲಿ ನೋಡಬಹುದಾಗಿದೆ.

**ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.)**
**ಕವಿಪ್ರನಿನಿ**

ಪ್ರತಿಗಳು:

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ/ನಿರ್ದೇಶಕರು (ಹಣಕಾಸು), ಬೆಸ್ಕಾಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂ.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ. ಮತ್ತು ಮಾ.ಸಂ.)/(ನಿ.ವ್ಯ.) ಮತ್ತು ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಇವರುಗಳ ಆಪ್ತ ಕಾರ್ಯದರ್ಶಿಗಳು, ಬೆಂ.
6. ಅಧಿಕ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಇವರ ಆಪ್ತ ಕಾರ್ಯದರ್ಶಿ, ಬೆಂ.

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

7. ಎಲ್ಲಾ ಅಧೀಕ್ಷಕ ಇಂಜಿನಿಯರ್ / ಎಲ್ಲಾ ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ಎಸ್ಕಾಂ.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ.
9. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ, ಎಸ್ಕಾಂ.
10. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಗಳು ಮಾಹಿತಿಗಾಗಿ:

1. ಶ್ರೀ.ನಾಗರಾಜ್, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ & ನಿರ್ದೇಶಕರು, ಕವಿಪ್ರನಿನಿ/ಬೆಸ್ಕಾಂ/ಮೆಸ್ಕಾಂ/ಗೆಸ್ಕಾಂ/ಚಾವಿಸನಿನಿ, ಬೆಂಗಳೂರು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.

ಲಗತ್ತು:

ಗೆ,
(ನೇಮಕಾತಿ ಪ್ರಾಧಿಕಾರಿ)
-------------------------------
-------------------------------

ಮಾನ್ಯರೆ,

ವಿಷಯ: ಆಸ್ತಿ ಮತ್ತು ಹೊಣೆ ಪಟ್ಟಿ ಸಲ್ಲಿಸುವ ಬಗ್ಗೆ.
ಉಲ್ಲೇಖ: 1. ಆದೇಶ ಸಂಖ್ಯೆ: ಕೆಇಬಿ/ಬಿ4/7626/85-86 ದಿನಾಂಕ:07-08-1987.
2. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ34/ಎಸ್ಎ4/7626/ 1985-86 ದಿನಾಂಕ: 03.02.2009.
3. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ5ಬಿ/11333/2009-10 ದಿನಾಂಕ: 04-01-2015.

-----

ಕವಿಮಂ ನೌಕರರ ಸೇವಾ (ನಡತೆ) ನಿಬಂಧನೆಗಳು 1988ರ ನಿಬಂಧನೆ 23ರ ಅನ್ವಯ ನನ್ನ ಆಸ್ತಿ ಮತ್ತು ಹೊಣೆ ವಿವರಗಳನ್ನು ಮಾಹಿತಿಗಾಗಿ ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಲಾಗಿದೆ. ನನ್ನ ಆಸ್ತಿ ಮತ್ತು ಹೊಣೆ ಪಟ್ಟಿಯ ಸಾರಾಂಶ ಈ ಕೆಳಕಂಡಂತೆ ನಮೂದಿಸಿದೆ.

| | ವಿವರ (ಪ್ರಸ್ತುತ ಬೆಲೆ/ಸಾಲ) | 31-12-2015 ರಂದು | 31-12-2016 ರಂದು |
|---|---|---|---|
| **A** | **ಆಸ್ತಿ** | | |
| 1 | ಸ್ಥಿರಾಸ್ತಿ | | |
| 2 | ಚರಾಸ್ತಿ | | |
| 3 | ಆರ್ಥಿಕ ಪತ್ರಗಳು | | |
| 4 | ಇತರೆ | | |
| | **ಒಟ್ಟು** | | |
| **B** | **ಹೊಣೆ** | | |
| 1 | ಗೃಹ ಸಾಲ | | |
| 2 | ವಾಹನದ ಸಾಲ | | |
| 3 | ಇತರೆ ಸಾಲಗಳು (ಸಂಸ್ಥೆಗಳಂದ) | | |
| 4 | ಇತರೆ | | |
| | **ಒಟ್ಟು** | | |
| **C** | **ಎಲ್ಲಾ ಮೂಲಗಳಂದ ವಾರ್ಷಿಕ ಒಟ್ಟು ಆದಾಯ** | | |
| **D** | **ಒಟ್ಟು ಉಳಿತಾಯದ ಮೊತ್ತ** | | |

ಸೂಚನೆ:-ನಾನು 14 ವರ್ಷಗಳಗಿಂತ ಕಡಿಮೆ ವಯಸ್ಸಿನ ಬಾಲಕಾರ್ಮಿಕರನ್ನು ಮನೆಯಲ್ಲಿ ಅಥವಾ ಕಛೇರಿಯಲ್ಲಿ ಕೆಲಸಕ್ಕೆ ತೊಡಗಿಸಿಕೊಂಡಿಲ್ಲ ಎಂದು ಸ್ವಯಂ ದೃಢೀಕರಿಸುತ್ತೇನೆ.

ನಿಮ್ಮ ವಿಶ್ವಾಸಿ,

ದಿನಾಂಕ:

ಸಹಿ.......................
ಹೆಸರು ಮತ್ತು ಪದವೃಂದ,
ಪಿನ್ ನಂ,______ ಕಛೇರಿ ವಿಳಾಸ

# <u>ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ</u>

**------- ಕ್ಯಾಲೆಂಡರ್ ವರ್ಷದ ಆಸ್ತಿ ಮತ್ತು ಹೊಣೆಯ ವಿವರಣೆ**

**ಮಂಡಳಿಯ ಅಧಿಕೃತ ಜ್ಞಾಪನ ಸಂಖ್ಯೆ: ಕವಿಪ್ರನಿನಿ/ಬಿ4/7626/1985-86 ದಿನಾಂಕ: 07.08.1987 ರ ಪ್ರಕಾರ**

1. ಅಧಿಕಾರಿಯ ಹೆಸರು :

2. ವೈಯಕ್ತಿಕ ಗುರುತಿನ ಸಂಖ್ಯೆ :
   (ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿದಂತೆ)
3. ಹಾಲಿ ಹೊಂದಿರುವ ಹುದ್ದೆ :

4. ಕೆಲಸ ಮಾಡುವ ಕಛೇರಿ :

5. ಕೆಲಸಕ್ಕೆ ಸೇರಿದ ದಿನಾಂಕ :

6. ಜನ್ಮ ದಿನಾಂಕ :

7. ನಿವೃತ್ತಿ ಹೊಂದುವ ದಿನಾಂಕ :

8. ಈಗಿನ ವೇತನ ಮತ್ತು ಶ್ರೇಣಿ :

9. ಸದರಿ ಕ್ಯಾಲೆಂಡರ್ ವರ್ಷದ ಒಟ್ಟು ವೇತನ :

**1. ಷೇರುಗಳು : ಡಿಬೆಂಚರುಗಳು : ಅಡಮಾನಗಳು ಮತ್ತು ಬ್ಯಾಂಕ್ ಠೇವಣಿಗಳು (ಪ್ರತ್ಯೇಕವಾಗಿ ಕೊಡತಕ್ಕದ್ದು)**

| ಕ್ರಮ. ಸಂಖ್ಯೆ | ವಿವರ | ಷೇರುಗಳು | ಮ್ಯೂಚುಯಲ್ ಫಂಡ್ | ಡಿಬೆಂಚರುಗಳು | ಅಡಮಾನಗಳು (NSC & NSS) | ನಗದು ಕೈ ಹಣ | ಉಳಿತಾಯ ಖಾತೆ | ಬ್ಯಾಂಕ್ ಠೇವಣಿಗಳು | ಇತರೆ ಠೇವಣಿಗಳು |
|---|---|---|---|---|---|---|---|---|---|
| 1. | ಯಾರ ಹೆಸರಿಗೆ ಇಟ್ಟಿದ ಅಥವಾ ಮಾಡಲಾಗಿದೆ ಸ್ವಂತ ಹೆಸರಿನಲ್ಲಿ ಇಲ್ಲದಿದ್ದಲ್ಲಿ ಯಾರ ಹೆಸರಿಗೆ ಮಾಡಿದೆಯೋ ಅವರ ಹೆಸರು ಮತ್ತು ನೌಕರರೊಂದಿಗೆ ಅವರ ಸಂಬಂಧದ ವಿವರಗಳು. | | | | | | | | |
| 2. | ಬೆಲೆ | | | | | | | | |
| 3. | ಬ್ಯಾಂಕಿನ : ಕಂಪನಿಯ ಹೆಸರು | | | | | | | | |
| 4. | ಹೊಂದಿದ ವಿಧಾನ | | | | | | | | |
| 5. | ಹೊಂದಿದ ದಿನಾಂಕ | | | | | | | | |
| 6. | ಆದಾಯ (ಮೇಲ್ಕಂಡವುಗಳಿಂದ) | | | | | | | | |

| **2. ಆಸ್ತಿ ಸ್ಥಿರ ಆಸ್ತಿ (ವರ್ಷಾಂತ್ಯದಲ್ಲಿರುವಂತೆ)** | | | | | |
|---|---|---|---|---|---|
| ಕ್ರಮ. ಸಂಖ್ಯೆ | ವಿವರ | ತೋಟ ಮತ್ತು ಪ್ಲಾಂಟೇಷನ್ ಜಮೀನು | ತರಿ ಅಥವಾ ನೀರಾವರಿ | ಒಣ ಭೂಮಿ ಅಥವಾ ಖುಷ್ಕಿ ಜಮೀನು | ಮನೆ ನಿವೇಶನ ಮತ್ತು ಕಟ್ಟಡಗಳು |
| 1. | ಯಾರ ಹೆಸರಿನಲ್ಲಿದೆ (ಸ್ವಂತ ಹೆಸರಿನಲ್ಲಿ ಇಲ್ಲದಿದ್ದರೆ ಯಾರ ಹೆಸರಿನಲ್ಲಿದೆಯೋ ಅವರ ವಿವರ ಮತ್ತು ಕ.ವಿ.ಮಂಡಳಿ ನೌಕರರೊಂದಿಗೆ ಅವರ ಸಂಬಂಧ). | | | | |
| 2. | ಸ್ಥಳ | | | | |
| 3. | ಜಿಲ್ಲೆ | | | | |
| 4. | ತಾಲ್ಲೂಕು | | | | |
| 5. | ಹಳ್ಳಿ ಅಥವಾ ನಗರ | | | | |
| 6. | ಸರ್ವೆ ನಂಬರು | | | | |
| 7. | ವಿಸ್ತೀರ್ಣ | | | | |
| 8. | ಆದಾಯ | | | | |
| 9. | ಕೊಟ್ಟಿರುವ ಬೆಲೆ | | | | |
| 10. | ಅಂದಾಜು ಬೆಲೆ | | | | |
| 11. | ಖರೀದಿಸಿದ : ಪಡೆದ ದಿನಾಂಕ | | | | |
| 12. | ಮಾಲೀಕತ್ವ ಇದ್ದಲ್ಲಿ ಹೇಗೆ ಬಂತು? (ಕೊಂಡಿದ್ದು ಕೊಡುಗೆ ಅಥವಾ ಪಿತ್ರಾರ್ಜಿತ) ಗುತ್ತಿಗೆ ಅಥವಾ ಭೋಗ್ಯಗಳಾದಲ್ಲಿ ಗುತ್ತಿಗೆ ಅಥವಾ ಭೋಗ್ಯ ಮಾಡಿದವರ ವಿವರ. | | | | |
| 13. | ಖರೀದಿಯ ಮೊತ್ತವನ್ನು ಹೊಂದಿಸಿದ ರೀತಿ (ಸಾಲ : ಉಳಿತಾಯ ಇತರ : ವಿವರಗಳೊಂದಿಗೆ). | | | | |

| 3. ಎರಡನೇ ಪ್ಯಾರಾದಲ್ಲಿ ಹೇಳಿರುವುದನ್ನು ಬಿಟ್ಟು ಉಳಿದ ಚರಾಸ್ತಿಗಳು | | | |
|---|---|---|---|
| 1. | ವಿವರ ಮತ್ತು ಬಗ್ಗೆ | : | |
| 2. | ಹೊಂದಿದ ವಿಧಾನ ಮತ್ತು ದಿನಾಂಕ | : | |
| 3. | ಕೊಟ್ಟ ಬೆಲೆ | : | |
| ಸೂಚನೆ:– ಪ್ರತಿ ವಸ್ತುವನ್ನು ವರ್ಷಾಂತ್ಯದಲ್ಲಿರುವಂತೆ ಸಂಬಂಧಪಟ್ಟ ವಿವರ ಮತ್ತು ಬೆಲೆಯೊಂದಿಗೆ ನಮೂದಿಸತಕ್ಕದ್ದು. | | | |

| 3. (ಅ). ಜೀವ ವಿಮಾ ಕರಾರು ಪತ್ರ | | | |
|---|---|---|---|
| 1. | ವಿಮಾ ಕರಾರು ಪತ್ರದ ಸಂಖ್ಯೆ ಮತ್ತು ದಿನಾಂಕ | : | |
| 2. | ವಿಮಾ ಕಂಪನಿಯ ಹೆಸರು | : | |
| 3. | ವಿಮಾ ಮೊತ್ತ ಮತ್ತು ವಾಯಿದೆ ಮುಗಿಯುವ ದಿನಾಂಕ | : | |
| 4. | ವಾರ್ಷಿಕ ಕಂತಿನ ಮೊತ್ತ | : | |
| ಸೂಚನೆ:– ಮಂಡಳಿಯ ನೌಕರರು ಕಂತು ಕಟ್ಟುತ್ತಿರುವ ಕುಟುಂಬದ ಇತರ ಸದಸ್ಯರುಗಳ ವಿಮೆಯ ಬಗ್ಗೆಯೂ ವಿವರ ಸೇರಿಸಬೇಕು. | | | |

| (ಆ). ಭವಿಷ್ಯ ನಿಧಿ | | | |
|---|---|---|---|
| 1. | ಭವಿಷ್ಯ ನಿಧಿಯ ರೀತಿ ಪಿ.ಪಿ.ಎಫ್ : ಜಿ.ಪಿ.ಇ : ಸಿ.ಪಿ.ಎಫ್ ಖಾತೆ ಸಂಖ್ಯೆ | : | |
| 2. | ಲೆಕ್ಕ ತನಿಖಾ : ಲೆಕ್ಕಾಧಿಕಾರಿಯ ವರದಿಯಂತೆ ಇತ್ತೀಚಿನ ಶಿಲ್ಕು ವಿವರ ದಿನಾಂಕದೊಂದಿಗೆ | : | |
| 3. | ಅನಂತರ ನೀಡಿದ ವಂತಿಗೆ | : | |
| 4. | ಮೊತ್ತ | : | |
| ಸೂಚನೆ:– ಮಂಡಳಿಯ ನೌಕರರು ಕಂತು ಕಟ್ಟುತ್ತಿದ್ದಲ್ಲಿ ಅಂತಹ ಕುಟುಂಬದ ಸದಸ್ಯರ ಭವಿಷ್ಯ ನಿಧಿಯ ಕಂತುಗಳ ವಿವರ. | | | |

| 4. ಹೊಣೆ | | | |
|---|---|---|---|
| ಅ. | ಸಾಲ | | |
| 1. | ಸಾಲ ಕೊಟ್ಟವರ ಹೆಸರು ಮತ್ತು ವಿವರ | : | |
| 2. | ಮೊತ್ತ | : | |
| 3. | ಸಾಲ ಪಡೆದ ದಿನಾಂಕ | : | |
| 4. | ಉದ್ದೇಶ | : | |
| 5. | ವರ್ಷಾಂತ್ಯಹಲ್ಲಿ ಬಾಕಿ ಇರುವ ಸಾಲದ ಮೊತ್ತ | : | |

| ಆ. | ಇತರ ಹೊಣೆಗಳು | | |
|---|---|---|---|
| 6. | ಸಾಲ ಕೊಟ್ಟವರ ಹೆಸರು ಮತ್ತು ವಿವರ | : | |
| 7. | ಮೊತ್ತ | : | |
| 8. | ಹೊಣೆಗಾರಿಕೆಯ ಸ್ವರೂಪ ಮತ್ತು ಉದ್ದೇಶ | : | |
| 9. | ದಿನಾಂಕ | : | |
| 10. | ವರ್ಷಾಂತ್ಯಹಲ್ಲಿ ಬಾಕಿ ಇರುವ ಸಾಲದ ಮೊತ್ತ | : | |

| **5. ಸಾಲ**<br>**(ಅಧಿಕಾರಿ: ನೌಕರನು ಇತರರಿಗೆ ನೀಡಲಾಗಿರುವ ಸಾಲದ ವಿವರಗಳು)** | | | |
|---|---|---|---|
| 1. | ಸಾಲ ಪಡೆದವರ ಹೆಸರು ಮತ್ತು ವಿಳಾಸ | : | |
| 2. | ಮೊತ್ತ | : | |
| 3. | ದಿನಾಂಕ | : | |
| 4. | ಉದ್ದೇಶ | : | |
| ಮೇಲಿನ ಪ್ಯಾರಾಗಳಲ್ಲಿ ಕೊಟ್ಟಿರುವ ವಿವರಣೆಗಳು ಸಂಪೂರ್ಣವಾಗಿ ಸತ್ಯವಾಗಿದೆ ಎಂದು ನಾನು ಪ್ರಮಾಣೀಕರಸುತ್ತೇನೆ. ಮೇಲಿನ ಪ್ಯಾರಾಗಳಲ್ಲಿ ಕೊಡದೇ ಇರುವಂತಹ ಯಾವುದೇ ಆಸ್ತಿ ಹೊಣೆಯು ನನ್ನ ಸ್ವಂತ ಹೆಸರಿನಲ್ಲೇ ಆಗಲಿ ಅಥವಾ ಇನ್ಯಾರ ಹೆಸರಿನಲ್ಲೇ ಆಗಲಿ ನಾನು ಹೊಂದಿರುವುದಿಲ್ಲ. | | | |

**ಸಹಿ**

**ಸ್ಥಳ:–**

**ದಿನಾಂಕ:–**